ಊಟದ ಹೊತ್ತಿಗೆ ಹಾಜರಿ ಹಾಕಿ ಉಂಡು ಹೋಗುವುದೇ ದೊಡ್ಡ ಭಾಗ್ಯ. ಈಗಿನ ಮಕ್ಕಳು ದೊಡ್ಡಾಸ್ಪತ್ರೆಗಳಲ್ಲಲ್ಲದೆ ಮತ್ತೆಲ್ಲೂ ಅವತರಿಸುವುದಿಲ್ಲ ಅನ್ನುವುದು ಪರಮಸತ್ಯವಾಗಿರುವಂತೆ ವಿಶೇಷಕಟ್ಲೆಗಳು ಛತ್ರಗಳಲ್ಲಲ್ಲದೆ ಮನೆಯಲ್ಲಿ ನಡೆಯುವುದಿಲ್ಲ ಅನ್ನುವುದೂ ಕೂಡಾ ಸಾಬೀತಾಗಿಬಿಟ್ಟಿದೆ. ಆಶ್ಚರ್ಯ ಅನ್ನುವ ಹಾಗೆ ಈಗ ಪ್ರತಿಯೊಬ್ಬರ ಕೈಲೂ ದುಡ್ಡಿರುತ್ತದೆ. ಮತ್ತು ಅದನ್ನು ಖರ್ಚು ಮಾಡುವ ಉಮೇದೂ ಅಷ್ಟೇ ಪ್ರಮಾಣದಲ್ಲಿರುತ್ತದೆ ಅಂದರೆ ಅತಿಶಯೋಕ್ತಿಯಾಗಲಾರದೇನೋ. ಬಿಡಿ ಈ ವಿಷಯ. ಮೆಟ್ಟುಗತ್ತಿಗೂ, ಇದಕ್ಕೂ ಯಾತರ ಸಂಬಂಧ?

ಕೂರುವ ಮಣೆಯ ಗಾತ್ರ ಹೀಗೇ ಪ್ರಶಸ್ತವಾಗಿದ್ದರೂ ಅಡಿಕೆ ಸುಲಿತ ಮಾಡುವ ಕತ್ತಿಯ ವಿನ್ಯಾಸ ಮತ್ತೊಂದು ರೀತಿಯದು. ಅಡಿಕೆಕಾಯಿಯ ಸಿಪ್ಪೆ ಸುಲಿದು, ಸುಲಿಬೇಳೆಯನ್ನು ಕತ್ತರಿಸಿ ಮುಂದಿದ್ದ ಬುಟ್ಟಿ ತುಂಬಿಸುವುದು, ಕೊಳಗದಲ್ಲಿ ಅಳೆದು ಲೆಕ್ಕ ಬರೆಸಿ ಮನೆಮಕ್ಕಳೂ ಕೂಡಾ ಕೈಖರ್ಚಿಗೆ, ಅಥವಾ ಎಳ್ಳಮವಾಸ್ಯೆ ಜಾತ್ರೆಯ ಖರ್ಚಿಗೆ ದುಡ್ಡು ಮಾಡಿಕೊಳ್ಳುವುದು, ಕಾಲಗರ್ಭದಲ್ಲಿ ಸಂದು ಹೋಗಿರುವ ಕತೆ. ಈಗ ಅಡಿಕೆಕೊನೆ ಉದುರು ಮಾಡುವುದಕ್ಕೂ ಮಿಷನ್ನು, ಸುಲಿಯುವುದಕ್ಕೂ ಮಿಷನ್ನು. ಕೈಯಲ್ಲಿ ಅಡಿಕೆಸುಲಿತ ಮಾಡುತ್ತಿದ್ದ ಕಾಲದಲ್ಲಿ ಇರುತ್ತಿದ್ದ ಅಡಿಕೆಕೊಯ್ಲಿನ ಗೌಜು, ಗಲಾಟೆ, ಅವಲಕ್ಕಿ ಉಪ್ಕರಿ, ಬಿಸಿಬಿಸಿ ಚಾಗಳ ಭರಾಟೆ ಕೇವಲ ನೆನಪು. ಹಗಲು ಆಳುಕೆಲಸ ಮಾಡಿ ರಾತ್ರಿ ಅಡಿಕೆಸುಲಿತಕ್ಕೆಂದು ಬರುತ್ತಿದ್ದ ಆಳುಗಳ ಬಾಯಲ್ಲಿ ಅದೆಷ್ಟೊಂದು ಜನಪದ ಕತೆಗಳು, ಒಗಟುಗಳು, ಮನೆ ಹಿರಿಯರು ಕೇಳಿಸಿಕೊಂಡರೆ ಮುಖ ಸಿಂಡರಿಸುವ ಎರಡರ್ಥದ ಹಡೆ ಮಾತುಗಳೂ ಎಗ್ಗಿಲ್ಲದೆ ಕಿರಿಯರ ಕಿವಿದೆರೆ ತಲುಪಿ, 'ಎದ್ದು ಬರ್ತೀರೋ, ಇಲ್ರೋ? ನಾಳೆ ಇಸ್ಕೂಲಿಗೆ ಚಕ್ರಾನಾ?' ಎನ್ನುವ ಕರೆ ಒಳಗಿನಿಂದ ನಿಷ್ಠುರವಾಗಿ ಮೊಳಗುತ್ತಿತ್ತು. ಅಡಿಕೆಕೊಯ್ಲಿನ ಕಾಲ ಅಂದರೆ ಅದಿನ್ನೆಂತಾ ಯಮಚಳಿ. ಅಡಿಕೆ ಚೊಗರು ತಾಗಿ ಕಲೆಯಾಗಬಾರದೆಂದು ಅಡಿಕೆ ಸುಲಿತ ಮಾಡುವಾಗ ಹಳೆ ಬಟ್ಟೆಗಳನ್ನು ಧರಿಸಿಯೇ ಕೂರಬೇಕೆಂಬ ಕಡ್ಡಾಯ. ಹೊಟ್ಟೆಕರುಳು ಗದಗುಟ್ಟಿಸುವ ಚಳಿ ತಡೆಯಲು ಪಿಸಿದು ಕಂಡಿ ಬಿಟ್ಟುಕೊಂಡ ಹಳೆಯ ಸ್ವೆಟರುಗಳನ್ನು ಏರಿಸಿ, ತೂಕಡಿಸಿ ಬೀಳುವಂತಾದರೂ ಉತ್ಸಾಹ ಕುಗ್ಗುತ್ತಿರಲಿಲ್ಲ. ಅಡಿಕೆಸುಲಿತ ಅಭ್ಯಾಸಬಲದಿಂದ ತನ್ನಷ್ಟಕ್ಕೆ ಚಕಚಕ ನಡೆಯುತ್ತಿತ್ತಾದರೂ ಕೆಲವೊಮ್ಮೆ ಎಚ್ಚರ ತಪ್ಪಿ ಕೈ ಕುಯ್ದುಕೊಳ್ಳುವ ಪ್ರಸಂಗಗಳು ಅಪರೂಪವೇನಲ್ಲ. ಕೆಲವೊಂದು ಅಡಿಕೆಕಾಯಿಗಳಲ್ಲಿ ಅಡಿಕೆ ಬಲಿಯದೆ ಬರೀ ನೀರು ತುಂಬಿಕೊಂಡಿರುತ್ತಿದ್ದು ಈ ನೀರಿಗೆ ಅಡಿಕೆ ಕೊನೆ

